ದಿನಾಂಕ 08-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 1 ರ ಪರ ಶ್ರೀ ಎಸ್.ಆರ್.ಬಿ. ವಕೀಲರಿಂದಃ**

9. ವಾದಿ ಹಾಕಿದ ದಾವೆಯ ಪೂರ್ಣ ಮಾಹಿತಿ ನನಗೆ ಇದೆ ಎಂದರೆ ಸರಿ. ನಾನು ವಾದಿಯರು ಅವರ ವಕೀಲರಿಗೆ ಮಾಹಿತಿ ಕೊಡುವಾಗ ಜೊತೆಗೆ ಇರಲಿಲ್ಲ ಎಂದರೆ ಸರಿ. ನನಗೆ ಅವರ ಜೊತೆ ದಾವೆ ಸಲ್ಲಿಸಲು ತೊಂದರೆ ಇರಲಿಲ್ಲ ಎಂದೆರೆ ಸರಿ .

10. 1 ನೇ ಪ್ರತಿವಾದಿಯ ಮುತ್ತಜ್ಜನ ಹೆಸರು ಖೇಮು. ಸದ್ರಿ ಖೇಮುಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ಆದರೆ ಅಜ್ಜಣ್ಣ ಎಂಬ ಒಬ್ಬ ಮಗನ ಬಗ್ಗೆ ಗೊತ್ತು. ಅಜ್ಜಣ್ಣನಿಗೆ 3 ಜನ ಗಂಡು ಮಕ್ಕಳು. ಅವರ ಮಕ್ಕಳ ಹೆಸರು ಪುರುಷೊತ್ತಮ, ಕೃಷ್ಣ ಮತ್ತು ವಾಸುದೇವ. ಅವರಿಗೆ ಹೆಣ್ಣು ಮಕ್ಕಳು ಇಲ್ಲ. ಪುರುಷೊತ್ತಮರ ಹೆಂಡತಿಯ ಹೆಸರು ರುಕ್ಮೀಣಿ. ಕೃಷ್ಣಾ ರವರ ಹೆಂಡತಿಯ ಹೆಸರು ಜಾನಕಿ, ವಾಸುದೇವರ ಹೆಂಡತಿ ಹೆಸರು ತಾರಾ. ಪುರುಷೋತ್ತಮರಿಗೆ 5 ಜನ ಮಕ್ಕಳು ಎಂದರೆ ಸಾಕ್ಷಿ 4 ಜನ ಮಕ್ಕಳು ಎಂದು ನುಡಿಯುತ್ತಾರೆ. ಅವರಿಗೆ 4 ಜನ ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು ಎಂದರೆ ಸರಿ. ಅವರ ಗಂಡು ಮಕ್ಕಳು ರಾಮಚಂದ್ರ, ಗೋಪು, ಪೀರು, ಮತ್ತು ಸಾತು ಎಂದರೆ ಸರಿ . ಅವರ ಹೆಣ್ಣು ಮಗಳು ಗುಲಾಬಿ ಎಂದರೆ ಸರಿ. ವಾದಿಗೆ ಸದ್ರಿ ಗುಲಾಬಿ ಇರುವ ಬಗ್ಗೆ ನಾನು ಮಾಹಿತಿ ಕೊಟ್ಟಿದ್ದೇನೆ ಎಂದರೆ ಸರಿ . ಒಂದು ವೇಳೆ ಪುರುಷೊತ್ತಮರವರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಬಂದರೆ, ಅವರ ಹಕ್ಕಿನಲ್ಲಿ ಸದ್ರಿ ಗುಲಾಬಿಗೆ 1/5 ಅಂಶದ ಹಕ್ಕಿದೆ ಎಂದರೆ ಸರಿ. ಒಂದು ವೇಳೆ ಪುರುಷೊತ್ತಮರವರಿಗೆ ಆ ರೀತಿ ಹಕ್ಕು ಬಂದರೆ ನನಗೆ 1/20 ಅಂಶದ ಹಕ್ಕಿರುವುದು ಎಂದರೆ ಸಾಕ್ಷಿ ಸದ್ರಿ ಗುಲಾಬಿಗೆ ಹಕ್ಕಿಲ್ಲ ಹಾಗೂ ನಾಲ್ಕು ಜನರಿಗೆ ಮಾತ್ರ ತಲಾ ¼ ಅಂಶದ ಹಕ್ಕಿರುವುದು ಎಂದು ನುಡಿಯುತ್ತಾರೆ .

11. ಕೃಷ್ಣಾರವರಿಗೆ 3 ಜನ ಮಕ್ಕಳು ಎಂದರೆ ಸರಿ. ಅವರುಗಳು ಎಂದರೆ 1 ನೇ ಪ್ರತಿವಾದಿ ಹಾಗೂ ಲೀಲಾ ಮತ್ತು ಕುಸುಮಾ ಎಂದರೆ ಸರಿ. ಕೃಷ್ಣಾ ರರಿಗೆ ಬರುವ ಹಕ್ಕಿನಲ್ಲಿ ಅವರ ಮೂರು ಜನ ಮಕ್ಕಳಿಗೂ ಹಕ್ಕು ಬರುತ್ತದೆ ಎಂದರೆ ಸರಿ. ವಾಸುದೇವರವರಿಗೆ ಪ್ರತಿವಾದಿ 2 ರಿಂದ 4 ಹಾಗೂ ಸುರೇಶ ಎಂದರೆ ಸರಿ. ವಾಸುದೇವ ರಿಗೆ ಹೆಣ್ಣು ಮಕ್ಕಳು ಇರುತ್ತಾರೆ .ಅವರುಗಳೆಂದರೆ ಜೀವಿ , ಇಂದಿರಾ ಹಾಗೂ ರೇಖಾ.

12. ನನ್ನ ಪ್ರತಿವಾದ ಪತ್ರದ ಸಂಗತಿಗಳನ್ನು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುವುದು ಎಂದರೆ ಸರಿ . ನನ್ನ ಮುಖ್ಯ ವಿಚಾರಣಾ ಪತ್ರದ ಸಂಗತಿಗಳನ್ನು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುವುದು ಎಂದರೆ ಸರಿ. ನನ್ನ ಪ್ರತಿವಾದ ಪತ್ರದ ಸಂಗತಿಯನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿ. ನನ್ನ ಪ್ರತಿವಾದ ಪತ್ರದಲ್ಲಿ ವಾದಿಯರು 1 ನೇ ಪ್ರತಿವಾದಿಗೆ ಕೃಷಿ ಚಟುವಟಿಕೆಯಲ್ಲಿ ಯಾವತ್ತು ಸಹಕಾರ ಮಾಡಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ .

13. 1 ನೇ ಪ್ರತಿವಾದಿಯನ್ನು ಭಾಗ ನೀಡಿ ಎಂದು 20 ವರ್ಷಗಳಿಂದ ಹೇಳುತ್ತಾ ಬಂದಿದ್ದೇವೆ .ಈ ಬಗ್ಗೆ ನಾನು ಲಿಖಿತವಾಗಿ ಅವರಿಗೆ ನೋಟಿಸ್ ಕೊಟ್ಟಿಲ್ಲ. ಈ ದಾವೆ ದಾಖಲಿಸುವ 3 ವರ್ಷ ಪೂರ್ವದಲ್ಲಿ ಕೊನೆಯ ಬಾರಿ ಕೇಳಿದ್ದೇನೆ .ಆ ರೀತಿ ಕೇಳಿರುವುದು ಸಪ್ಟೆಂಬರ್ 2020 ರಲ್ಲಿ ಇರಬಹುದು ಎಂದರೆ ಸರಿ. 1 ನೇ ಪ್ರತಿವಾದಿ ಲಿಖಿತವಾಗಿ ಅದಕ್ಕೆ ಉತ್ತರ ಕೊಟ್ಟಿಲ್ಲ ಅದರೆ ಮೌಖಿಕವಾಗಿ ಕೊಟ್ಟಿದ್ದಾರೆ. 1 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಯಾವುದೇ ರೀತಿಯ ಹಕ್ಕು ಇಲ್ಲ ಎಂದು ನೋಟಿಸ್ ಗೆ ಉತ್ತರ ನೀಡಿ ತಿಳಿಸಿದ್ದಾರೆ ಎಂದರೆ ಗೊತ್ತಿಲ್ಲ.

**ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.